


### ಎಚ್ಚರಿಕೆಯ ಗಂಟೆ

‘ಹೆಚ್ಚು ಉಪ್ಪು ಬೇಗ ಮುಪ್ಪು’ (ಡಿ. 11, ಡಾ. ಭಗವಾನ್ ಬಿ.ಸಿ.) ಲೇಖನ ಮಾಹಿತಿಪೂರ್ಣವಾಗಿದೆ. ‘ಉಪ್ಪಿಗಿಂತ ರುಚಿಯಿಲ್ಲ’ ಎಂಬ ಗಾದೆಯಂತೆ ಭಾರತೀಯರು ರುಚಿಯ ಹೆಸರಿನಲ್ಲಿ ಹೆಚ್ಚು ಉಪ್ಪು ಸೇವಿಸುತ್ತ ತಮ್ಮ ದೇಹವನ್ನು ಕಾಯಿಲೆಗಳ ಆಗರ ಮಾಡಿಕೊಳ್ಳುತ್ತಿರುವುದು ವಿಷಾದನೀಯ. ಈ ಮುಖಪುಟ ಲೇಖನ ಎಚ್ಚರಿಕೆಯ ಗಂಟೆಯಂತಿದೆ ಹಾಗೂ ಜನರ ಕಣ್ತೆರೆಸುವಂತಿದೆ.

—ಎಸ್. ವಿಜಯಕುಮಾರಿ, ಬೆಂಗಳೂರು

### ಮಿತಗೊಳಿಸದೇ ವಿಧಿಯಿಲ್ಲ

ಅಪಾಯಕ್ಕೆ ಆಸ್ಪದವಾದ ಅಧಿಕ ಉಪ್ಪು ಸೇವನೆಯನ್ನು ಮಿತಗೊಳಿಸಲು ನಿರ್ದೇಶಿಸುವ ಹಾಗೂ ಪ್ರೇರೇಪಿಸುವ ಉಪಯುಕ್ತ ಲೇಖನವಿದು. ಸಿಹಿ ಇರುವ ಬಿಸ್ಕತ್‌ನಲ್ಲೂ ಉಪ್ಪಿರುವುದು ಸೋಜಿಗ ಎನಿಸಿದರೂ ವಾಸ್ತವ. ಆಹಾರ ಪದಾರ್ಥಗಳು ಹಾಳಾಗದಂತೆ ಉಳಿಯಲು ಉಪ್ಪೇ ರಕ್ಷಾವಿಧಿಯಲ್ಲವೇ?

—ಡಾ. ಮಹಾಬಲರಾಜು ಡಿ.ಕೆ., ದಾವಣಗೆರೆ

### ಉಪ್ಪಿಗಿಂತ ರುಚಿ ಇಲ್ಲ?

ವಿಶ್ಲೇಷಣಾತ್ಮಕ ಬರಹ ಉಪಯುಕ್ತವಾಗಿದೆ. ‘ಉಪ್ಪಿಗಿಂತ ರುಚಿ ಇಲ್ಲ’ ಎನ್ನುವ ವಾಕ್ಯಕ್ಕೆ ಮುಂದೇನು ಅರ್ಥವೋ ನಾ ಕಾಣೆ.

—ಲಕ್ಷ್ಮಣ್ ರಾವ್ ಎಂ.ಎಲ್., ದಾವಣಗೆರೆ

### ನೆಚ್ಚಿನ ‘ಸವಿ ಕರ್ನಾಟಕ’

ನನ್ನ ನೆಚ್ಚಿನ ‘ಸುಧಾ’ದಲ್ಲಿ ಪ್ರಕಟವಾಗುತ್ತಿರುವ ‘ಸವಿ ಕರ್ನಾಟಕ’ ಅಂಕಣ ಬಹಳ ಚೆನ್ನಾಗಿದೆ. ಆಯಾ ಜಿಲ್ಲೆಗಳ ವಿಶೇಷ ತಿನಿಸುಗಳನ್ನು, ಜೊತೆಗೆ ಅದರ ಅಪರೂಪದ ಸಂಗತಿಗಳನ್ನು ಪರಿಚಯಿಸುತ್ತಿರುವ ಪರಿ ಚೆನ್ನಾಗಿದೆ.

—ವಿನಯ್, ಮೈಸೂರು

### ಸಮಾಜಕ್ಕೆ ಬೇಕು ಇಂಥವರು

‘ಕೈಗಳಿಲ್ಲದೆ ಬದುಕು ಕಟ್ಟಿಕೊಂಡ ಕಥನ’ (ಡಿ. 11, ಶಶಿಕುಮಾರ್ ಸಿ.) ಸ್ಫೂರ್ತಿಕಥನದಲ್ಲಿ ಶುಭಜಿತ್ ಅವರ ಪರಿಚಯ ಪ್ರೇರಣಾದಾಯಕವಾಗಿದೆ. ಸಮಾಜದ ಕರುಣೆ, ಕನಿಕರದ ನಿರಾಕರಣೆ, ಸ್ವಾಭಿಮಾನ, ಸ್ವಾವಲಂಬನೆಯಿಂದ ತಮ್ಮ ಬದುಕು ಬೆಳಗಿಸಿಕೊಂಡ ಶುಭಜಿತ್ ಅವರು ಇಂದು ಒಂದು ಬೃಹತ್ ಸಂಸ್ಥೆಯಾಗಿ ಬೆಳೆದು ನಿಂತಿರುವ ರೀತಿ ವಿಸ್ಮಯವೆನಿಸುತ್ತದೆ.

—ಸುಮನಾ

### ಜೀವನಪ್ರೀತಿಗೊಂದು ನಿದರ್ಶನ

ಅಂಗವೈಕಲ್ಯವಿದ್ದರೂ ಅದನ್ನು ಕಾರಣವೆಂದುಕೊಳ್ಳದೇ ಸ್ವಾವಲಂಬನೆಯಿಂದ ಬದುಕುತ್ತಿರುವ ಶುಭಜಿತ್ ಭಟ್ಟಾಚಾರ್ಯ ಅವರನ್ನು ಕಂಡರೆ ಹೆಮ್ಮೆ ಎನಿಸುತ್ತದೆ. ಅವರ ಸಾಮಾಜಿಕ ಕಾರ್ಯಗಳು ಕಣ್ತೆರೆಸುವಂತಿವೆ. ಅವರ ಜೀವನಪ್ರೀತಿ ಅಚ್ಚರಿ ಹುಟ್ಟಿಸುತ್ತದೆ.

—ಜ್ಯೋತಿಶ್ರೀ, ಬೆಂಗಳೂರು



### ರಮಣೀಯ ಅನುಭವ

‘ಧನುಷ್ಕೋಡಿ; ದೇಶದ ಕೊನೆಯ ಹಾದಿ’ (ಡಿ. 11, ರಾಹುಲ ಬೆಳಗಲಿ), ಪ್ರವಾಸ ಕಥನದಲ್ಲಿ ಧನುಷ್ಕೋಡಿ ಬಗ್ಗೆ ಓದಿದಾಗ ಕುತೂಹಲ, ಅಚ್ಚರಿ ಎನಿಸಿತು.

ಕಥನ ಓದಿ, ನಮ್ಮ ದೇಶದಲ್ಲೇ, ದೇಸಿ ಪ್ರವಾಸಿ ಸ್ಥಳಗಳಿಗೆ ಹೋಗಿ ಬರುವುದು ಸಹ ಒಂದು ಅದ್ಭುತ ಅನುಭವ ಎನಿಸಿತು. ಮುಂದೊಂದು ದಿನ ಹೋಗಿ ಬರಬಹುದು ಎಂಬ ಭರವಸೆ ನೀಡಿತು. ಶಾಂತ ಸಾಗರ, ಮತ್ತು ರುದ್ರ ಸಾಗರದ ಬಗ್ಗೆ, ಹೇಗೆ ಹೋಗಬೇಕು, ಯಾವ ಸ್ಥಳಗಳನ್ನು ನೋಡಬೇಕು ಎಂಬುದರ ಮಾಹಿತಿ ಉಪಯುಕ್ತ ಎನಿಸಿತು. ರಮಣೀಯವಾದ ಛಾಯಾಚಿತ್ರಗಳು ಗಮನಸೆಳೆದವು.

—ರೇಶ್ಮಾ ಗುಳೇದಗುಡ್ಡಾಕರ್, ಕೊಟ್ಟೂರು





### ಭೂತಾಯಿ ಜವಾಬ್ದಾರಿ ನಮ್ಮದು

‘ಮಣ್ಣಿನ ಮಹಾತ್ಮೆ’ (ಡಿ. 11, ಯು. ಶ್ರೀನಿವಾಸಮೂರ್ತಿ) ಲೇಖನ ಓದಿ ಮಣ್ಣಿನ ಋಣ ನಮ್ಮ ಮೇಲೆ ಎಷ್ಟಿದೆ ಎಂದು ಅರಿವಾಯಿತು. ಹೆಣ್ಣು ಮತ್ತು ಹೊನ್ನಿನ ಋಣದ ಬಗ್ಗೆ ಓದಿ ಕೇಳಿ ತಿಳಿದಿದ್ದೆವು. ಆದರೆ ಮಣ್ಣಿನ ಬಗ್ಗೆ ತಿಳಿಯಲು ಅದೇನಿದೆ ಮಣ್ಣು ಎಂದು ಎಲ್ಲರಿಗೂ ತಿರಸ್ಕಾರ!

ಮಣ್ಣಿನ ಗುಣದಿಂದಲೇ ಪ್ರಕೃತಿಯ ಎಲ್ಲಾ ವಿದ್ಯಮಾನಗಳು ನಡೆಯುತ್ತಿರುವ ವಿಷಯ ತಿಳಿದು ನಮ್ಮೆಲ್ಲರ ಕಣ್ಣು ತೆರೆಯಬೇಕು. ಮಣ್ಣಿನಿಂದಲೇ ಈ ಭೂಮಿ ಇರುವುದು ಮತ್ತು ಈ ಭೂಮಿ ಇರುವುದರಿಂದಲೇ ನಾವು ಇರುವುದು ಎಂಬ ಅರಿವು ನಮಗಿರಬೇಕು. ಈ ಭೂಮಿಯೊಂದಿಗೆ ಮಣ್ಣು ಪಾಲಾಗುವವರೆಗೂ ನಮ್ಮನ್ನು ಪೊರೆಯುವ ಮಣ್ಣು ಅರ್ಥಾತ್ ಭೂಮಿ ತಾಯಿಯನ್ನು ರಕ್ಷಿಸುವ ಜವಾಬ್ದಾರಿ ನಮ್ಮದು.

—ವಾಸಣ್ಣ, ಧಾರವಾಡ



### ನಮ್ಮೂರಂದ್ರೆ...

‘ಮಲೆನಾಡಿನ ನಮ್ಮೂರಂದ್ರೆ...’ (ಡಿ. 11, ಎಸ್.ಪಿ. ವಿಜಯಲಕ್ಷ್ಮಿ) ‘ಚೆನ್ನುಡಿ’ಯಲ್ಲಿ ಪರಿಚಯಿಸಲಾದ ನರಸಿಂಹರಾಜಪುರದ ಭಾಷಾ ಶೈಲಿ ಸೊಗಸೆನಿಸಿತು.

ಚಿಕ್ಕಮಗಳೂರು ಜಿಲ್ಲೆಯ ತಾಲ್ಲೂಕು ಕೇಂದ್ರ ನರಸಿಂಹರಾಜಪುರ ಭದ್ರಾನದಿ ಮುಳುಗಡೆಯ ಹಿನ್ನೀರಿನಿಂದ ಆವೃತವಾಗಿರುವುದು ಊರಿನ ಭೌಗೋಳಿಕ ರಚನೆಯನ್ನು ವಿಶೇಷವಾಗಿಸಿದೆ. ಭಾಷೆಯೊಂದಿಗೆ ತಳಕು ಹಾಕಿಕೊಂಡ ಊರಿನ ಪ್ರಕೃತಿ, ದಿನಚರಿ, ಆಚರಣೆಯೂ ವಿಶಿಷ್ಟವೆನಿಸಿದ್ದರಲ್ಲಿ ಅಚ್ಚರಿಯಿಲ್ಲ. ಮಡವತ್ತಿ ಅಮ್ಮೋರ ಸೇವೆಯ ಪ್ರಸಂಗದ ವಿವರಣೆ ಸೊಗಸೆನಿಸಿತು.

—ಚೇತನಾ ಎಂ., ಹಾಸನ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in